2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 28539 ಃ 2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಅಮಿತ್ | ಸಿ ಡಬ್ಲ್ಯು | 1 |
| ತಂದೆಯ ಹೆಸರು | ಕುಮಾರ್ | ಪಿ ಡಬ್ಲ್ಯು | 1 |
| ವಯಸ್ಸು | 28 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸಸ್ಥಾನ | ಶ್ರೀ ನಗರ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 02.05.2026

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನ್ಯಾಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಗಲಾಟೆ ನಡೆದಿಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಸಣ್ಣಪುಟ್ಟ ಭಿನ್ನಾಭಿಪ್ರಾಯ ಇದ್ದುದರಿಂದ ಆರೋಪಿಯ ವಿರುದ್ದ ದೂರು ನೀಡಿದ್ದೇನೆ. ಅದನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ-1 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದ್ದೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಇನ್ನೊಂದು ದಾಖಲೆ ನೋಡುತ್ತಿದ್ದು ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರ್ತಿಸುತ್ತಿದ್ದೇನೆ ಅದನ್ನು ನಿಪಿ-2, ಅದರಲ್ಲಿ ಸಾಕ್ಷಿ ಗುರ್ತಿಸಿದ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೆ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ.

ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಎಂದು ಹಿರಿಯ ಸ.ಸ.ಅ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು ಅವರಿಗೆ ಅನುಮತಿ ನೀಡಲಾಯಿತು.

ದಿನಾಂಕಃ11.03.2022 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಮಧ್ಯಪಾನ ಮಾಡಲು ಬನಶಂಕಲರಿ 2ನೇ ಹಂತ, ಯಡಿಯೂರು ಸರ್ಕಲ್ ಕನಕಪುರ ಮುಖ್ಯ ರಸ್ತೆ ನಂ 69/1 ರಲ್ಲಿ ಮಂಜುನಾಥ್ ಬಾರ್ ಅಂಡ್ ರೆಸ್ಟೋರೆಂಟ್ ಹೋಗಿದ್ದು, ರಾತ್ರಿ ಸುಮಾರು 11.00 ಗಂಟೆ ಸಮಯದಲ್ಲಿ ಅದೇ ಬಾರ್ ನಲ್ಲಿದ್ದ ಆರೋಪಿಯು ನನಗೆ ಲೋಫರ್

ನನ್ಮಗನೆ ನಮ್ಮ ಹುಡುಗರಿಗೇ ಹೊಡೆಯುತ್ತೇನೆ ಎಂದು ಹೇಳಿಕೊಂಡು ಓಡಾಡುತ್ತಿದ್ದೀಯಾ ? ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಿದ್ದು ಎಂದರೆ ಸರಿಯಲ್ಲ. ಆರೋಪಿಯು ನನಗೆ ನಾನು ಆ ರೀತಿ ಯಾವತ್ತೂ ಹೇಳಿಲ್ಲ ಎಂದಾಗ ಆರೋಪಿಯು ಮೊಬೈಲ್ ನಿಂದ ಯಾವುದೇ ವಾಯ್ಸ್ ರೆಕಾರ್ಡ್ ಅನ್ನು ಹಾಕಿ ಕೇಳಿಸಲು ಪ್ರಯತ್ನಿಸಿದ್ದು, ನಾನು ಅದು ನನ್ನ ವಾಯ್ಸ್ ಅಲ್ಲ ಎಂದು ಹೇಳಿದ ಕೂಡ ಏಕಾ ಏಕಿ ಕೋಪಗೊಂಡ ಆರೋಪಿಯಾದ ನನ್ನ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ಅವರು ಮುಂದು ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿಕೊಂಡ ಎಂದರೆ ಸರಿಯಲ್ಲ. ಆರೋಪಿ ನನ್ನ ಕೈಯಲ್ಲಿದ್ದ ಮೋಟಾರ್ ಬೈಕ್ ನ ಲೋಹದ ಕೀ ನಿಂದ ನನ್ನ ರವರ ಮುಖ, ಎಡ ಕಣ್ಣು, ಎಡ ಕೈ, ಕತ್ತು, ಕಾಲುಗಳ ಮೇಲೆ ಹೊಡೆದು ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ದಿಃ 12.03.2022 ರಂದು ಘಟನಾ ಸ್ಥಳಕ್ಕೆ ಬಂದು ಬೆಳಿಗ್ಗೆ 11.30 ರಿಂದ 12.00 ಗಂಟೆಯವರೆಗೆ ಸಾಕ್ಷಿಗಳ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ-2 ರಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣದಿಂದ ಆರೋಪಿಗೆ ಸಹಾಯ ಆಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ.